# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




144 ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭಮೇಳದಲ್ಲಿ ಉತ್ತರ ಪ್ರದೇಶ ಸರಕಾರದ ಮಾಹಿತಿಯಂತೆ 56 ಕೋಟಿಗೂ ಮೀರಿ ಭಕ್ತರು ಕುಂಭಸ್ನಾನದಲ್ಲಿ ಭಾಗವಹಿಸಿದ್ದಾರೆ.


ಸಂಪುಟ : 46 | ಸಂಚಿಕೆ : 21 | ಮಾಘ | ಕಲಿಯುಗಾಬ್ದ 5126 | 01-03-2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ರಾಷ್ಟ್ರಪ್ರಜ್ಞೆಯನ್ನು ಬಡಿದೆಬ್ಬಿಸಿದ ವಂದೇಮಾತರಂ ಗೀತೆಗೆ 150ರ ಸಂಭ್ರಮ

ಭಾರತದ ಸ್ವಾತಂತ್ರ್ಯ ಹೋರಾಟ 2000 ವರ್ಷಗಳ ಸಂಘರ್ಷದ ಇತಿಹಾಸವನ್ನು ಹೊಂದಿದೆ. ವಿವಿಧ ಮಜಲುಗಳಲ್ಲಿ ಈ ನಾಡಿನ ಸ್ವರಾಜ್ಯಕ್ಕಾಗಿ ದುಡಿದವರಿದ್ದಾರೆ. ರಾಜ-ಮಹಾರಾಜರುಗಳಿಂದ ಹಿಡಿದು, ಸಾಮಾನ್ಯ ವ್ಯಕ್ತಿಯವರೆಗೂ ಈ ನಾಡಿನ ಸ್ವಾತಂತ್ರ್ಯಕ್ಕಾಗಿ ಶ್ರಮವಹಿಸಿದ್ದಾರೆ. ಅನೇಕ ಮಂದಿ ದಾರ್ಶನಿಕರು ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಃ ತೊಡಗಿಸಿಕೊಂಡಿದ್ದಲ್ಲದೇ ಪ್ರೇರಣಾ ಸ್ರೋತವಾಗಿ ಮುಂದಿನ ಪೀಳಿಗೆಗೆ ದಾರಿ ತೋರಿಸಿದ್ದಾರೆ. ಈ ನಾಡಿನ ಸ್ವಾತಂತ್ರ್ಯ ಹೋರಾಟದ ವಿಶೇಷತೆ ಏನೆಂದರೆ, ಕೇವಲ ವ್ಯಕ್ತಿಗಳು ಮಾತ್ರ ತಮ್ಮ ತ್ಯಾಗ, ಬಲಿದಾನ, ಶೌರ್ಯ, ಸಾಹಸಗಳ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯನ್ನು ನೀಡಿದ್ದಲ್ಲದೇ ಈ ನಾಡಿನಲ್ಲಿ ನಿರ್ಮಾಣಗೊಂಡ ಗೀತೆಗಳು, ಘೋಷಣೆಗಳು, ಮಂತ್ರಗಳು ಕೂಡಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆಯನ್ನು ಒದಗಿಸಿದೆ. ಅವುಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವಂತಹ ಗೀತೆ 'ವಂದೇ ಮಾತರಂ'. 1875ರಲ್ಲಿ ಬರೆಯಲ್ಪಟ್ಟ 'ವಂದೇ ಮಾತರಂ'ಗೆ ಇದೀಗ 150ರ ಸಂಭ್ರಮ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿದೇಶಿಗರ ವಿರುದ್ಧ ಕೊನೆಯದಾಗಿ ಈ ನಾಡಿನ ಜನ ಟೊಂಕಕಟ್ಟಿನಿಂತಿದ್ದು ಬ್ರಿಟಿಷರ ವಿರುದ್ಧ. ಸುಮಾರು 200 ವರ್ಷಗಳ ಕಾಲ ಆಡಳಿತ ನಡೆಸಿದ ಬ್ರಿಟಿಷರು ಈ ನಾಡನ್ನು ಎಷ್ಟು ಸಾಧ್ಯವೋ, ಅಷ್ಟು ವಿಘಟಿಸಲು ಪ್ರಯತ್ನಿಸಿದರು. ಜಾತಿ ಆಧಾರಿತವಾಗಿ, ಆಚರಣಾ ವಿಧಾನಗಳ ಆಧಾರಿತವಾಗಿ ಹಾಗೂ ಇನ್ನಿತರ ಮಾನದಂಡಗಳ ಮೂಲಕ ಭಾರತೀಯರನ್ನು ಒಡೆದು ಆಳುವ ನೀತಿಯ ವ್ಯೂಹದಲ್ಲಿ ಸಿಲುಕಿಸಲು ಪ್ರಯತ್ನಿಸಿದರು. ಅಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರವನ್ನು ತಾಯಿಯಂತೆ ಪೂಜಿಸುವ, ಅವಳಿಗೆ ಎದುರಾದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹಾಗೂ ವಿದೇಶಿಗರ ಆಡಳಿತದಿಂದ ಆಕೆ ಕಳೆದುಕೊಂಡ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಳ್ಳಬೇಕು ಎಂಬ ರಾಷ್ಟ್ರಭಾವ ಜಾಗರಣವನ್ನು ಉಂಟುಮಾಡುವಲ್ಲಿ ಮಹತ್ತರದ ಪಾತ್ರ ವಹಿಸಿದ ಗೀತೆ ಬಂಕಿಮಚಂದ್ರ ಚಟರ್ಜಿ ಅವರು ಬರೆದ 'ಆನಂದಮಠ' ಕಾದಂಬರಿಯಲ್ಲಿರುವ ವಂದೇ ಮಾತರಂ ಗೀತೆ. ಕೇವಲ 'ವಂದೇ ಮಾತರಂ' ಎಂಬ ಪದಗಳಷ್ಟೇ ಸಹಸ್ರಾರು ಭಾರತೀಯರಲ್ಲಿ ಪಂಚಾಕ್ಷರಿ ಮಂತ್ರದಂತೆ ಪಸರಿ ರಾಷ್ಟ್ರೀಯತೆಯ ಕಿಚ್ಚನ್ನು ಹೆಚ್ಚಿಸುವಲ್ಲಿ ಪ್ರಧಾನಪಾತ್ರ ವಹಿಸಿತು. ಆಂಗ್ಲರ ವಿರುದ್ಧ ಮೊಳಗಿದ ಸಿಂಹನಾದವಾಗಿ ಮಾರ್ದನಿಸಿತು.

ಸಾಹಿತಿ ಬಂಕಿಮ್ ಚಂದ್ರ ಚಟರ್ಜಿ ಅವರು ಬಂಗಾಳದವರು. ಭಾರತದಲ್ಲಿ ಅದಾಗಲೇ ಘಟಿಸಿದ ಅನೇಕ ಸ್ವಾತಂತ್ರ್ಯ ಹೋರಾಟಗಳನ್ನು ಓದಿದ, ನೋಡಿದ ಅನುಭವಗಳು ಅವರನ್ನು ರಾಷ್ಟ್ರದ ಪರ ಚಿಂತಿಸುವಂತೆ ಮಾಡಿತು. 1770ರಲ್ಲಿ ಬಂಗಾಳದಲ್ಲಿ ಬ್ರಿಟಿಷರ ವಿರುದ್ಧ ನಡೆದ ಸನ್ಯಾಸಿಗಳ ಹೋರಾಟ, 1857ರ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ ಅವರಲ್ಲಿ ಅಚ್ಚಳಿಯದೇ ಉಳಿದಿತ್ತು. ಇಂತಹ ಹೋರಾಟಗಳ ಸಂದರ್ಭಗಳಲ್ಲಿ ಬ್ರಿಟಿಷರ ದಬ್ಬಾಳಿಕೆಯನ್ನು ಕಂಡಿದ್ದರು. ಭಾರತೀಯರು ನಾನಾ ಕಾರಣಗಳಿಂದ ಒಡೆದು ಹಂಚಿಹೋದದ್ದನ್ನು ಗಮನಿಸಿದ್ದರು. ಇಡೀ ಭಾರತವನ್ನು ಒಂದಾಗಿ ಪ್ರತಿನಿಧಿಸುವ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಜನಮಾನಸವನ್ನು ಎಚ್ಚರಿಸುವುದಕ್ಕಾಗಿ ಬರೆದ ಗೀತೆಯೇ 'ವಂದೇ ಮಾತರಂ'.



ಬಂಕಿಮಚಂದ್ರ ಚಟರ್ಜಿ ಅವರು 1882ರಲ್ಲಿ 'ಆನಂದಮಠ' ಕಾದಂಬರಿಯನ್ನು ಪ್ರಕಟಿಸಿದರು. ಕೆಲವು ತಿಂಗಳುಗಳಲ್ಲಿ ಬಂಗಾಳದಾದ್ಯಂತ 'ವಂದೇ ಮಾತರಂ' ಗೀತೆಯ ಕುರಿತು ಮೆಚ್ಚುಗೆಗಳು ವ್ಯಕ್ತವಾದವು. ಜನರು ಆ ಹಾಡಿಗೆ ನೀಡಿದ ಪ್ರಶಂಸೆ 1896ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ರವೀಂದ್ರನಾಥ್ ಠಾಗೋರ್ ಅವರು ಮೊದಲ ಬಾರಿಗೆ 'ವಂದೇ ಮಾತರಂ' ಹಾಡುವಂತೆ ಮಾಡಿತು.

ಅಲ್ಲಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ 'ವಂದೇ ಮಾತರಂ' ಪಂಚಾಕ್ಷರಿ ಮಂತ್ರವಾಗಿ, ರಾಷ್ಟ್ರಭಾವ ಜಾಗರಣದ ಗಂಗಾಪ್ರವಾಹವಾಗಿ, ಭಾರತದ ಸ್ವಾತಂತ್ರ್ಯಕ್ಕಾಗಿ ವಿಶ್ವದಾದ್ಯಂತ ನಡೆದ ಹೋರಾಟಗಳಿಗೆ ಪ್ರೇರಣಾ ದೀಪವಾಗಿ ಬೆಳಗಿತು. ಆನಂತರ ನಡೆದ ಎಲ್ಲಾ ರೀತಿಯ ಹೋರಾಟಗಳಲ್ಲಿ ಸಮಾನವಾಗಿ ಗುರುತಿಸಿಕೊಂಡ ಘೋಷಣೆಯಾಗಿ ವಂದೆ ಮಾತರಂ ನಿಂತಿತು.



## ವಂದೇ ಮಾತರಂ ಗೀತೆಯಲ್ಲಿ ಏನಿದೆ?

ಬಂಗಾಲಿ ಮತ್ತು ಸಂಸ್ಕೃತ ಭಾಷೆಗಳ ಪದಗಳಿಂದ ರಚಿತಗೊಂಡ ಗೀತೆ 'ವಂದೇ ಮಾತರಂ'. ವಂದೇ ಮಾತರಂ ಪದದ ಅರ್ಥ 'ತಾಯಿಗೆ ವಂದಿಸುವೆ' ಎನ್ನುವುದಾಗಿದೆ. ಈ ಹಾಡಿನ ಪಲ್ಲವಿ ಮತ್ತು ಮೊದಲ ಚರಣ ಭಾರತದ ಭೌಗೋಳಿಕ ವಿವಿಧತೆಯ ಕುರಿತು ಕೊಂಡಾಡಿದ್ದು ನಂತರದ ಎರಡು ಚರಣಗಳು ಆಕೆಯ ಗುಣವಿಶೇಷತೆಗಳನ್ನು ತಿಳಿಸುತ್ತವೆ. ಅದರ ನಂತರದ ನಾಲ್ಕು ಚರಣಗಳು ಭಾರತ ಮಾತೆ ಮತ್ತು ಅವಳ ಮಕ್ಕಳಾದ ನಮ್ಮ ನಡುವಿನ ಸಂಬಂಧವನ್ನು ಹಾಗೂ ಭಾರತಮಾತೆ ದುರ್ಗೆ, ಲಕ್ಷ್ಮಿ, ಸರಸ್ವತಿಯ ಸ್ವರೂಪವೆಂದೂ ಬಣ್ಣಿಸಲಾಗಿದೆ.

## ಕ್ರಾಂತಿ-ಶಾಂತಿ ಮಾರ್ಗದ ಪ್ರೇರಣಾ ಸ್ರೋತ

ಈ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾದ ಪಾತ್ರವಹಿಸಿದ್ದ ಎರಡು ಸ್ವಾತಂತ್ರ್ಯ ಹೋರಾಟದ ಮಾರ್ಗ 'ಕ್ರಾಂತಿಯ ಮಾರ್ಗ' ಮತ್ತು 'ಶಾಂತಿಯ ಮಾರ್ಗ'. ಈ ಎರಡೂ ಮಾರ್ಗವನ್ನು ಸಮಾನವಾಗಿ ಪ್ರೇರೇಪಿಸಿದ ಕೀರ್ತಿ ವಂದೇಮಾತರಂ ಗೀತೆಗೆ ಸಲ್ಲುತ್ತದೆ. ಎಷ್ಟರ ಮಟ್ಟಿಗೆ ವಂದೇ ಮಾತರಂ ಗೀತೆ ಮತ್ತು ಘೋಷಣೆ ಬ್ರಿಟಿಷರ ನಿದ್ದೆ ಕೆಡಿಸಿತ್ತೆಂದರೆ 'ವಂದೇ ಮಾತರಂ' ಘೋಷಣೆಯನ್ನು ಬ್ರಿಟಿಷ್ ಸರ್ಕಾರ ನಿಷೇಧಿಸಬೇಕಾಯಿತು. ಸಾರ್ವಜನಿಕವಾಗಿ ಘೋಷಣೆ ಕೂಗಿದವರನ್ನು ಬಂಧಿಸಲಾಗುತ್ತಿತ್ತು. 1915ರಿಂದ ಪ್ರತಿ ವರ್ಷ ಕಾಂಗ್ರೆಸ್ ಅಧಿವೇಶನದಲ್ಲಿ "ವಂದೇ ಮಾತರಂ ಹಾಡುವುದಕ್ಕಾಗಿಯೇ ಆಗಿನ ಖ್ಯಾತ ಗಾಯಕ ವಿಷ್ಣು ದಿಗಂಬರ ಪುಲಸ್ಕರ್ ಅವರನ್ನು ಆಹ್ವಾನಿಸಲಾಗುತ್ತಿತ್ತು. ಗಾಂಧೀಜಿ ತಮ್ಮ ಭಾಷಣಗಳಲ್ಲಿ ಈ ಹಾಡಿನ ಅರ್ಥವನ್ನು ಒತ್ತಿ ಹೇಳುತ್ತಿದ್ದರು. 1905ರಲ್ಲಿ ಮೇಡಮ್ ಕಾಮಾ ಜರ್ಮನಿಯಲ್ಲಿ ಭಾರತದ ಧ್ವಜ ಹಿಡಿದು ಬ್ರಿಟಿಷರ ವಿರುದ್ಧ ಪ್ರತಿಭಟಿಸಿದ್ದರು. ಆ ಧ್ವಜದ ಮೇಲೆ 'ವಂದೇ ಮಾತರಂ' ಎಂದು ಬರೆಯಲಾಗಿತ್ತು. ರಾಮ್‌ಪ್ರಸಾದ್ ಬಿಸ್ಮಿಲ್, ಚಂದ್ರಶೇಖರ್ ಆಜಾದ್, ಭಗತ್ ಸಿಂಗ್, ರಾಜಗುರು, ಸುಖ್‌ದೇವ್, ಆಶ್ಫಾಕುಲ್ಲಾ ಖಾನ್ ಮುಂತಾದ ಕ್ರಾಂತಿಕಾರಿಗಳ ಧ್ಯೇಯವಾಕ್ಯವೇ ವಂದೇ ಮಾತರಂ ಆಗಿತ್ತು. ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಎಲ್ಲಾ ಚಳುವಳಿಗಳಲ್ಲಿ ಮೊಳಗುತ್ತಿದ್ದ ಘೋಷವಾಕ್ಯ 'ವಂದೇ ಮಾತರಂ'. ಸುಭಾಷ್‌ಚಂದ್ರ ಬೋಸ್‌ರ ಆಜಾದ್ ಹಿಂದ್ ಫೌಜಿನ ರಣಮಂತ್ರವೇ 'ವಂದೇ ಮಾತರಂ'. 1942-44ರ ಅವಧಿಯಲ್ಲಿ ಆಝಾದ್ ಹಿಂದ್ ರೇಡಿಯೋದಲ್ಲಿ ಸುಭಾಷ್‌ಚಂದ್ರ ಬೋಸ್ ಸಂದೇಶ ಆರಂಭವಾಗುತ್ತಿದ್ದದ್ದು 'ವಂದೇ ಮಾತರಂ'ನಿಂದ. ಬಂಗಾಳದಲ್ಲಿ ಬಿಪಿನ್ ಚಂದ್ರಪಾಲ್, ಅರವಿಂದ್ ಘೋಷ್, ಪಂಜಾಬ್‌ನಲ್ಲಿ ಲಾಲಾ ಲಜಪತ್ ರಾಯ್, ಮಹಾರಾಷ್ಟ್ರದಲ್ಲಿ ತಿಲಕ್, ಕೇಶವ ಬಲಿರಾಮ್ ಹೆಡಗೆವಾರ್, ತಮಿಳುನಾಡಿನಲ್ಲಿ ಸುಬ್ರಮಣ್ಯಂ ಭಾರತಿ, ಚಿದಂಬರಂ ಪಿಳ್ಳೈ, ಸುಬ್ರಹ್ಮಣ್ಯ ಶಿವ ಮುಂತಾದವರು 'ವಂದೇ ಮಾತರಂ' ಆಂದೋಲನದ ನೇತೃತ್ವ ವಹಿಸಿದ್ದರು.

## ವಂದೇ ಮಾತರಂ ಗೀತೆಗೆ ತಪ್ಪಿದ ರಾಷ್ಟ್ರಗೀತೆ ಗೌರವ

'ವಂದೇ ಮಾತರಂ' ಗೀತೆ ಅಷ್ಟೆಲ್ಲ ಪ್ರಸಿದ್ಧಿ ಪಡೆದಿದ್ದರೂ, ಸ್ವಾತಂತ್ರ್ಯದ ನಂತರ ಅದು ರಾಷ್ಟ್ರಗೀತೆಯಾಗಲಿಲ್ಲ. ಮಿಲಿಟರಿ ಬ್ಯಾಂಡ್ ಸಂಗೀತ ರಚನೆಗೆ 'ವಂದೇ ಮಾತರಂ' ಹೊಂದುವುದಿಲ್ಲ ಎಂಬುದು ನೆಹರು ಅವರು ಕೊಟ್ಟ ಸಮರ್ಥನೆಯಾಗಿತ್ತು. ಆಗ ಖ್ಯಾತ ಸಂಗೀತಗಾರ ಕೃಷ್ಣರಾವ್ ಪುಲಂಬ್ರೀಕರ್, ಯಾವುದೇ ಭಾರತೀಯ ಅಥವಾ ವಿದೇಶಿ ವಾದ್ಯಕ್ಕೆ 'ವಂದೇ ಮಾತರಂ' ಗೀತೆಯನ್ನು ಹೊಂದಿಸಬಹುದು ಎಂದು ಹೇಳಿದರೂ, ಅವರಿಗೆ ಅವಕಾಶ ನೀಡಲು ನೆಹರು ನಿರಾಕರಿಸಿದ್ದರು ಎನ್ನಲಾಗಿದೆ.

## 'ರಾಷ್ಟ್ರೀಯ ಹಾಡು' ಸ್ಥಾನಮಾನ

ಈ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಭಾಗವೇ ಆದ 'ವಂದೇ ಮಾತರಂ' ಗೀತೆಗೆ 'ರಾಷ್ಟ್ರೀಯ ಹಾಡು' ಸ್ಥಾನಮಾನವನ್ನು ನೀಡಲಾಯಿತು. ಈ ಸ್ಥಾನಮಾನ ಸಿಕ್ಕಿ ವಂದೇ ಮಾತರಂಗೆ ಈ ವರ್ಷ 75 ವರ್ಷಗಳು ತುಂಬಿದೆ. 1950 ಜ.24ರಂದು 'ವಂದೇ ಮಾತರಂ' ಗೀತೆಗೆ 'ಜನ ಗಣ ಮನ'ದಷ್ಟೇ ಸಮಾನ ಸ್ಥಾನ ಹಾಗೂ ಗೌರವ ಘೋಷಣೆ ಆಯಿತು. ಅಂದು ಸಂವಿಧಾನ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಾಬು ರಾಜೇಂದ್ರ ಪ್ರಸಾದ್, ಜನಗಣಮನ ಭಾರತದ ರಾಷ್ಟ್ರಗೀತೆಯಾಗಿರಲಿದೆ ಎಂದು ಘೋಷಿಸಿದ್ದರಲ್ಲದೆ, ಸ್ವಾತಂತ್ರ್ಯ ಹೋರಾಟದಲ್ಲಿ ಪ್ರೇರಣೆಯೊದಗಿಸಿದ ವಂದೇಮಾತರಂಗೂ ಸಮಗೌರವ ನೀಡಲಾಗುವುದು ಎಂದರು.

## ವಿವಿಧ ಪ್ರಸಿದ್ಧ ಸಂಯೋಜನೆಗಳು

ಸ್ವಾತಂತ್ರ್ಯ ಪೂರ್ವದಿಂದ ಇಂದಿನವರೆಗೂ ಆನೇಕ ಸಂಗೀತಗಾರರು ಭಿನ್ನ ಶೈಲಿಗಳಲ್ಲಿ 'ವಂದೇ ಮಾತರಂ' ಗೀತೆಗೆ ರಾಗ ಸಂಯೋಜಿಸಿ ಹಾಡಿದ್ದಾರೆ. ಜಡುನಾಥ್ ಭಟ್ಟಾಚಾರ್ಯ ಈ ಗೀತೆಗೆ ಮೊದಲು ರಾಗ ಸಂಯೋಜಿಸಿದವರು. ನಂತರ ದಕ್ಷಿಣ ಚರಣ್ ಸೇನ್, ವಿ.ಡಿ. ಆಂಭಾಲಿಕರ್ ಭಿನ್ನ ಶೈಲಿಯಲ್ಲಿ ಹಾಡನ್ನು ಪ್ರಸ್ತುತಪಡಿಸಿದ್ದರು. 1947, ಆಗಸ್ಟ್ 15ರಂದು ಪಂ. ಓಂಕಾರನಾಥ್ ಠಾಕೂರ್ ತಮ್ಮ ಶಾಸ್ತ್ರೀಯ ಗಾಯನದಲ್ಲಿ ಆಕಾಶವಾಣಿಯಲ್ಲಿ ಮೊದಲ ಬಾರಿ 'ವಂದೇ ಮಾತರಂ' ಗೀತೆ ಪ್ರಸ್ತುತಪಡಿಸಿದರು. ಇಂದಿಗೂ ಆಕಾಶವಾಣಿ ಪ್ರತಿನಿತ್ಯ 'ವಂದೇ ಮಾತರಂ' ಗೀತೆಯೊಂದಿಗೆ ತನ್ನ ಪ್ರಸಾರ ಕಾರ್ಯ ಆರಂಭಿಸುತ್ತದೆ. 1952ರಲ್ಲಿ ತೆರೆಕಂಡ ಆನಂದಮಠ ಕಾದಂಬರಿ ಆಧಾರಿತ ಚಲನಚಿತ್ರದಲ್ಲಿ ನಿರ್ದೇಶಕ ಹೇಮಂತ್ ಕುಮಾರ್ 'ವಂದೇ ಮಾತರಂ' ಗೀತೆಗೆ ಹೊಸ ಸ್ಪರ್ಶ ನೀಡಿದ್ದರು. ಲತಾ ಮಂಗೇಶ್ವರ್, ಸಂಗೀತಾ ಕಟ್ಟಿ, ವಿಜಯ್ ಪ್ರಕಾಶ್, ಶ್ರೇಯಾ ಘೋಷಲ್ ಮುಂತಾದ ಗಾಯಕರು ವಿವಿಧ ರಾಗಸಂಯೋಜನೆಗಳಿಂದ ಹಾಡಿರುವ ಈ ಗೀತೆ ಹೆಚ್ಚು ಪ್ರಸಿದ್ಧಿ ಪಡೆದಿದೆ.

## ವಂದೇ ಮಾತರಂಗೆ ವಿರೋಧ!

1923ರಲ್ಲಿ ಆಂಧ್ರಪ್ರದೇಶದ ಕಾಕಿನಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ವಂದೇ ಮಾತರಂ' ಗೀತೆಗೆ ಮೊದಲ ವಿರೋಧ ವ್ಯಕ್ತವಾಯಿತು. ಅಧಿವೇಶನದ ಅಧ್ಯಕ್ಷರಾಗಿದ್ದ ಮೌಲಾನಾ ಮಹಮದ್ ಅಲಿ, 'ವಂದೇ ಮಾತರಂ' ಒಂದು ಕೋಮಿನ ಗೀತೆ. ಇಸ್ಲಾಂ ಪ್ರಕಾರ ಸಂಗೀತ ನಿಷೇಧವೆಂದು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ, ತಮ್ಮ ರಿಲಿಜನ್‌ನಲ್ಲಿ ದೇಶವನ್ನು ದೇವತೆ ರೂಪದಲ್ಲಿ ನೋಡುವ ಪದ್ಧತಿ ಇಲ್ಲ ಎಂದು ಆಕ್ಷೇಪಿಸಿದರು. ಆದರೂ ಗಾಯಕ ವಿಷ್ಣು ದಿಗಂಬರ ಪುಲಸ್ಕರ್ ಅವರು ಮೌಲಾನಾ ಅವರ ಆಕ್ಷೇಪ ತಿರಸ್ಕರಿಸಿ, 'ವಂದೇ ಮಾತರಂ' ಹಾಡಿದ್ದರು. ಮಹಮ್ಮದ್ ಅಲಿ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ದೇಶದಲ್ಲಿ ಪ್ರಬಲಗೊಂಡಂತೆ ವಂದೇ ಮಾತರಂ ಹಾಡಿಗೆ ನಿಷೇಧ ತರಲು ಒತ್ತಡ ಹೇರಿತ್ತು. ಹೀಗಾಗಿ ಕಾಂಗ್ರೆಸ್ ಮೊದಲೆರಡು ಚರಣಗಳನ್ನು ಮಾತ್ರ ತಮ್ಮ ಸಮಾರಂಭಗಳಲ್ಲಿ ಹಾಡಲಾಗುತ್ತಿತ್ತು. ■

## ಸಂಸ್ಮರಣೆ

# ಸುಬ್ರೋತೋ ಮುಖರ್ಜಿ

ಭಾರತ ಸಹಸ್ರ ಸಹಸ್ರ ಸಂಖ್ಯೆಯ ಹೆಮ್ಮೆಯ ಯೋಧರನ್ನು ಹೊಂದಿದಂತಹ ದೇಶ. ಇಲ್ಲಿಯ ಸೈನಿಕರು ಅಗಾಧವಾದ ರಾಷ್ಟ್ರಭಕ್ತಿಯನ್ನು ಹೊಂದಿದ್ದು, ವಿನೂತನವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹವರಲ್ಲಿ ಸುಬ್ರೋತೋ ಮುಖರ್ಜಿಯವರು ಪ್ರಮುಖರು. ಅಗಣಿತ ಸಾಧನೆಗಳ ಗಣಿಯಾಗಿದ್ದ ಅವರ ಸಾಧನೆಗಳನ್ನು ಅಕ್ಷರಗಳಲ್ಲಿ ಹಿಡಿದಿಡಲು ಅಸಾಧ್ಯ.

ಕೋಲ್ಕತ್ತಾ ಸುಬ್ರೋತೋ ಮುಖರ್ಜಿಯವರ ಜನ್ಮಸ್ಥಳ. ತಂದೆ ಭಾರತೀಯ ನಾಗರಿಕ ಸೇವಾ ಅಧಿಕಾರಿ ಸತೀಶ್ ಚಂದ್ರ ಮುಖರ್ಜಿ ಮತ್ತು ತಾಯಿ ಸಮಾಜ ಸೇವಕಿ ಚಾರುಲತಾ ಮುಖರ್ಜಿ ಅವರ ಮಗನಾಗಿ ಮಾರ್ಚ್ 5, 1911 ರಂದು ಜನಿಸಿದರು. ಸುಬ್ರೋತೋ ಮುಖರ್ಜಿ 1939ರಲ್ಲಿ ಶಾರದಾ ಪಂಡಿತ್ ಅವರನ್ನು ವಿವಾಹವಾದರು.

ಮುಖರ್ಜಿಯವರು IAFನಲ್ಲಿ ಹಾರಾಟ ಮತ್ತು ಸ್ಕ್ವಾಡ್ರನ್ ಅನ್ನು ಕಮಾಂಡ್ ಮಾಡಿದ ಮೊದಲ ಭಾರತೀಯರು. ಸಾರ್ವಭೌಮ ಸ್ವತಂತ್ರ ಭಾರತದ ವಾಯುಪಡೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ಅವರದ್ದು. ಅವರು RAF ಕ್ರಾನ್ವೆಲ್‌ನಲ್ಲಿ ತರಬೇತಿಗಾಗಿ ಆಯ್ಕೆಯಾದ ಕೆಡೆಟ್‌ಗಳಲ್ಲಿ ಒಬ್ಬರಾಗಿದ್ದರು. 1928ರಲ್ಲಿ, ಭಾರತದ ಬ್ರಿಟಿಷ್ ಸರ್ಕಾರವು ಭಾರತೀಯರಿಗೆ ಕ್ರಾನ್ವೆಲ್‌ನ ರಾಯಲ್ ಏರ್ ಫೋರ್ಸ್ ಕಾಲೇಜಿಗೆ ಪ್ರವೇಶಿಸಲು ಅನುಮತಿ ನೀಡಿದ ವ್ಯಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದರು. ಕ್ರಾನ್ವೆಲ್‌ನಲ್ಲಿ ತರಬೇತಿಯನ್ನು ಪೂರ್ಣಗೊಳಿಸಿದ ನಂತರ, ಅವರನ್ನು ಏಪ್ರಿಲ್ 1, 1933ರಂದು ರಚಿಸಲಾದ ಮೊದಲ ಭಾರತೀಯ ವಾಯುಪಡೆಯ ಸ್ಕ್ವಾಡ್ರನ್‌ನಲ್ಲಿ ಪೈಲಟ್ ಆಗಿ ನಿಯೋಜಿಸಲಾಯಿತು. ಜುಲೈ 1938ರಲ್ಲಿ, ಅವರು ಭಾರತೀಯ ವಾಯುಪಡೆಯ ಸ್ಕ್ವಾಡ್ರನ್ ಇನ್-ಫ್ಲೈಟ್ 'B' ನಲ್ಲಿ ಫ್ಲೈಯಿಂಗ್ ಆಫೀಸರ್ ಆಗಿ ನಂ.1 ಸ್ಥಾನಕ್ಕೆ ಏರಿದರು. ವಾಯುವ್ಯ ಗಡಿನಾಡು ಪ್ರಾಂತ್ಯದ ಬುಡಕಟ್ಟು ಜನಸಂಖ್ಯೆಯ ವಿರುದ್ಧದ ಕಾರ್ಯಾಚರಣೆಯ ಸಮಯದಲ್ಲಿ, ಸ್ಕ್ವಾಡ್ರನ್ ಅನ್ನು ಸುಬ್ರೋತೋ ಮುಖರ್ಜಿ ನೇತೃತ್ವ ವಹಿಸಿದ್ದರು.



ಎರಡನೆಯ ಮಹಾಯುದ್ಧದ ಸಮಯದಲ್ಲಿ, ಸುಬ್ರೋತೋ ಮುಖರ್ಜಿ ಅವರಿಗೆ ಜೂನ್ 1945ರಲ್ಲಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ (OBE) ನೀಡಲಾಯಿತು. ಅವರು ವಾಯುನೆಲೆ, RAF ಸ್ಟೇಷನ್ ಕೊಹತ್ ಅನ್ನು ಕಮಾಂಡ್ ಮಾಡಿದ ಮೊದಲ ಭಾರತೀಯರಾಗಿದ್ದರು. 1947ರಲ್ಲಿ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಭಾರತೀಯ ವಾಯುಪಡೆಯ ಯುದ್ಧ ಮತ್ತು ರಕ್ಷಣಾ ನೀತಿಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರಿಂದ ಸುಬ್ರೋತೋ ಮುಖರ್ಜಿ ಅವರನ್ನು ಏರ್ ವೈಸ್ ಮಾರ್ಷಲ್ ಆಗಿ ನೇಮಿಸಲಾಯಿತು. ಮಾರ್ಚ್ 15, 1948 ರಂದು ವಾಯುಪಡೆಯ ಮುಖ್ಯಸ್ಥರಾಗಿ ಮತ್ತು RIAFನ ಏರ್ ಮಾರ್ಷಲ್ ಕಮಾಂಡರ್ ಆಗಿ ಅಧಿಕಾರ ವಹಿಸಿಕೊಂಡರು.

ಭಾರತದ ನವದೆಹಲಿಯಿಂದ ಜಪಾನ್‌ನ ಟೋಕಿಯೋಗೆ ವಿಮಾನಗಳನ್ನು ಏರ್ ಇಂಡಿಯಾ 1960ರಲ್ಲಿ ನೀಡಿತು. ಅದರ ಸಾಗಣಿಕೆಯ ಸಂಪೂರ್ಣ ಜವಾಬ್ದಾರಿ ಅವರ ಮೇಲಿತ್ತು. ಮುಖರ್ಜಿಗೆ, ವಿಮಾನದಲ್ಲಿ ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ ಜನರಲ್ ಮ್ಯಾನೇಜರ್ ಏರ್ ಕಮೋಡೋರ್ ಪ್ರತಾಪ್ ಚಂದ್ರಲಾಲ್ ಅವರೂ ಇದ್ದರು.

ನವೆಂಬರ್ 8, 1960 ರಂದು, ಉಸಿರಾಟದ ಸಮಸ್ಯೆಯ ಕಾರಣದಿಂದಾಗಿ ಮುಖರ್ಜಿಯವರು ಕೊನೆಯುಸಿರನ್ನೆಳೆದರು. ಸೇನೆಯಲ್ಲಿ 49 ವರ್ಷಗಳ ಕಾಲ ಸಲ್ಲಿಸಿದ ಅವರ ನಿಷ್ಠೆಯ ಸೇವೆಗೆ 49 ವಿಮಾನಗಳನ್ನು ಹಾರಾಡಿಸಿ ಅವರಿಗೆ ಅಂತಿಮ ಗೌರವವನ್ನು ಸಲ್ಲಿಸಲಾಗಿತ್ತು. ಅವರ ಅಗಲುವಿಕೆ ದೇಶ ಮತ್ತು ಭಾರತೀಯ ವಾಯುಪಡೆ ಎರಡಕ್ಕೂ ಭರಿಸಲಾಗದ ನಷ್ಟ.

# ಗ್ರಾಮ ವಿಕಾಸಗೊಳಿಸಿದ ಯುವಕರ ತಂಡದ ಯಶೋಗಾಥೆ

ಕನಸುಗಳನ್ನು ಸಾಕಾರಗೊಳಿಸುವಲ್ಲಿ ಮುಂದೆ ಸಾಗುವ ಇಂದಿನ ಭರದ ಸ್ಪರ್ಧೆಯಲ್ಲಿ, ಹಿಂದೆ ಉಳಿದುಹೋದವರ ಕೈ ಹಿಡಿದು ಅವರನ್ನು ಮುನ್ನಡೆಸಿದಂಥಹ, ಉಚ್ಚ ಶಿಕ್ಷಣದ ನಂತರ ಸಂಪಾದನೆಯೇ ನಮ್ಮ ಗುರಿ ಎಂಬ ಧ್ಯೇಯೋದ್ದೇಶವನ್ನು ಬದಲಿಸಿ "ಕೈ ಜೋಡಿಸೋಣ, ಮುನ್ನಡೆಯೋಣ" ಎಂದವರು ಸ್ವಾಮಿ ವಿವೇಕಾನಂದ ಸೇವಾ ಮಂಡಲದ ಯುವಕರು. ಮಹಾರಾಷ್ಟ್ರದ ಡೊಂಬಿವಲಿ ನಗರದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ಒಂದಷ್ಟು ಹುಡುಗರು, ಅವಶ್ಯಕತೆಯಿದ್ದ ವಿದ್ಯಾರ್ಥಿಗಳಿಗೋಸ್ಕರ 1991ರಲ್ಲಿ ಒಂದು ಸಣ್ಣ ಗ್ರಂಥಾಲಯವನ್ನು ಸ್ಥಾಪಿಸುವ ಮೂಲಕ ಈ ಕಾರ್ಯದ ಶುಭಾರಂಭವನ್ನು ಮಾಡಿದರು. ಸಂಘದ ಅನುಭವಿ ಸ್ವಯಂಸೇವಕರಾಗಿದ್ದ ವಿಷ್ಣು ಗಜಾನನ ದೇವಸ್ಥಲೀ ಮತ್ತು ಪ್ರೊ.ಸುರೇಶ ನಾಖರೆ ಅವರ ಪ್ರೇರಣೆಯಿಂದ ಇಂಜಿನಿಯರಿಂಗ್ ಓದುತ್ತಿದ್ದ 15 ವಿದ್ಯಾರ್ಥಿಗಳ ಬಲದಿಂದ ಈ ಮಂಡಲಿಯು ಸ್ಥಾಪನೆಯಾಯಿತು.

ಈ ಯುವಕರು ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಡೊಂಬಿವಿಲಿಯ ಮಹಾನಗರಪಾಲಿಕೆಯ ಸರ್ಕಾರಿ ವಿದ್ಯಾಲಯಗಳಿಗೆ ಹೋಗಿ ಮಕ್ಕಳಿಗೆ ವಿಜ್ಞಾನ ಹಾಗೂ ಗಣಿತ ವಿಷಯಗಳನ್ನು ಹೇಳಿಕೊಡುತ್ತಾ ಬಂದರು. ಮೊದಲ 18 ವರ್ಷಗಳು ಸತತವಾಗಿ ಗ್ರಾಮದ ಮಕ್ಕಳಿಗೂ ಕಲಿಸುತ್ತಿದ್ದರು. 40 ಯುವ ಇಂಜಿನಿಯರುಗಳನ್ನು ಒಳಗೊಂಡ ಈ ಮಂಡಲಿಯು ಥಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿ ವಾಸವಾಗಿರುವ ವನವಾಸಿಗಳ ಗ್ರಾಮವಾದ "ವಿಹೀ" ಯನ್ನು ದತ್ತು ತೆಗೆದುಕೊಂಡು, ಹಲವಾರು ವರ್ಷಗಳ ಕಾಲ ನಿರಂತರವಾಗಿ ಶಿಕ್ಷಣ, ಆರೋಗ್ಯ ಹಾಗೂ ಸ್ವಾವಲಂಬನೆಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿತು.




ಕೇವಲ 30 ಪುಸ್ತಕಗಳಿಂದ ಬರುತ್ತಿದ್ದ ಬಾಡಿಗೆಯಿಂದ ಒಂದು ಸಣ್ಣ ಗೋದಾಮಿನಲ್ಲಿ ಪ್ರಾರಂಭವಾದ ಈ ಗ್ರಂಥಾಲಯದಲ್ಲಿ ಇಂದು 8000ಕ್ಕೂ ಅಧಿಕ ಪುಸ್ತಕಗಳು ಮತ್ತು 100 ವಿದ್ಯಾರ್ಥಿಗಳು ಕುಳಿತು ಓದುವ ವ್ಯವಸ್ಥೆಯಿದೆ. ಈ 22 ವರ್ಷಗಳಲ್ಲಿ ಡೊಂಬಿವಿಲಿಯ ಮತ್ತು ಅಕ್ಕಪಕ್ಕದ ಸುಮಾರು 10 ಸಾವಿರಕ್ಕೂ ಅಧಿಕ ಇಂಜಿನಿಯರುಗಳು ಈ ಗ್ರಂಥಾಲಯದ ಲಾಭವನ್ನು ಪಡೆಯುತ್ತಿದ್ದಾರೆ.

ಥಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿರುವ ವನವಾಸಿಗಳ ಗ್ರಾಮ ವಿಹೀ, ಈಗೊಂದು 20 ವರ್ಷಗಳ ಹಿಂದೆ ಮಹಾರಾಷ್ಟ್ರದ ಅತ್ಯಂತ ಹಿಂದುಳಿದ ಗ್ರಾಮಗಳಲ್ಲಿ ಒಂದಾಗಿತ್ತು. ಇಲ್ಲಿನ ಯುವಕರು ನಿರಂತರವಾಗಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸುವ ಮೂಲಕ ಆರೋಗ್ಯದ ಮಟ್ಟವನ್ನು ಸುಧಾರಿಸಿದರು ಮತ್ತು ಗ್ರಾಮಸ್ಥರ ನೆರವಿನಿಂದ ಮಳೆನೀರಿನ ಸಂರಕ್ಷಣೆಯನ್ನು ಮಾಡಲು 3 ಚೆಕ್ ಡ್ಯಾಂ (ತಡೆ ಅಣೆಕಟ್ಟು) ಗಳನ್ನು ಕಟ್ಟಿದರು. ಇಷ್ಟೇ ಅಲ್ಲ, ರೈತರಿಗೆ ಜೈವಿಕ ಉಳುಮೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಿ, ಅವರ ಫಸಲು ಹಾಗೂ ಆದಾಯವನ್ನು ಹೆಚ್ಚಿಸುವಲ್ಲಿ ಸಹಕರಿಸಿದರು. ವನವಾಸಿ ಮಹಿಳೆಯರೂ ಸ್ವಾವಲಂಬಿಗಳಾಗುವಂತೆ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಅವರನ್ನು ವ್ಯಾಪಾರಗಳಲ್ಲಿ ಬೆಸೆದರು. ಮಹಾರಾಷ್ಟ್ರದಲ್ಲಿ ದೀಪಾವಳಿಯಂದು ಬೆಳಗುವ ಪಾರಂಪರಿಕ ದೀಪದ ತೈಲವನ್ನು ತಯಾರಿಸುವ ಕೆಲಸವನ್ನು ಕಲಿತು, ಈ ಮಹಿಳೆಯರು ಕಳೆದ ವರ್ಷ 50 ಸಾವಿರ ಪೊಟ್ಟಣಗಳನ್ನು ಡೊಂಬಿವಿಲಿಯ ಕ್ಷೇತ್ರದಲ್ಲಿ ಮಾರಿದರು.


ಕಚ್ಚಾ ವಸ್ತುವಿನ ಖರೀದಿಯಿಂದ ಹಿಡಿದು ಪ್ಯಾಕೇಜಿಂಗ್ ಕಾರ್ಯದವರೆಗೂ ಎಲ್ಲಾ ಕೆಲಸವನ್ನೂ ಮಹಿಳೆಯರೇ ಖುದ್ದಾಗಿ ಮಾಡಿದರು, ಮಂಡಲಿಯು ಕೇವಲ ಅವರಿಗೆ ಮಾರುಕಟ್ಟೆಯನ್ನು ಒದಗಿಸಿತು ಅಷ್ಟೇ!! ಮಂಡಲಿಯು ಇಲ್ಲಿ ಕಾರ್ಯ ಪ್ರಾರಂಭಿಸಿದಾಗ ಹತ್ತನೇ ತರಗತಿಯ ವಿದ್ಯಾರ್ಥಿಯನ್ನು ಕಾಣಲೂ ಕಷ್ಟವಾಗಿತ್ತು. ಆದರೆ ಈಗ ವನವಾಸಿ ಪರಿವಾರದ ಅನೇಕ ಮಕ್ಕಳು ಪದವೀಧರರೋ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದವರೋ ಆಗಿ, ಉದ್ಯೋಗದಲ್ಲಿದ್ದಾರೆ. ಮಂಡಲಿಯು ಸತತ ಮೂರು ವರ್ಷಗಳ ಕಾಲ ಆರ್ಥಿಕವಾಗಿ ಹಿಂದುಳಿದ ಮೇಧಾವಿ ಮಕ್ಕಳಿಗಾಗಿ ಎಸ್‌ಎಸ್‌ಎಲ್‌ಸಿಯ ತರಬೇತಿಯನ್ನು ಅತಿ ಕಡಿಮೆ ವೆಚ್ಚದಲ್ಲಿ ದೊರಕುವಂತೆ ಮಾಡಿತು.

ಕೇತನ್ ಬೋಂದ್ರೆ ಸಂಪರ್ಕ ಸಂಖ್ಯೆ : 98339 30032

## ಪುಸ್ತಕ ಪರಿಚಯ

### ಸಾಮರಸ್ಯದ ಪ್ರತಿಮೆಗಳು

**ಮೂಲ:** ಕೆ. ಶ್ಯಾಮಪ್ರಸಾದ್
**ಅನುವಾದಕರು:** ಜನಮೇಜಯ ಉಮರ್ಜಿ
**ಪ್ರಕಾಶಕರು:** ಅಯೋಧ್ಯಾ ಪಬ್ಲಿಕೇಶನ್ಸ್
**ಬೆಲೆ:** ರೂ.120



ಒಡೆದು ಆಳುವುದು ವಿದೇಶೀಯರ ನೀತಿ. ನಮಗೆ ವಿಶ್ವವೇ ಪರಿವಾರದ ರೀತಿ. ಕೆಲವರಿಗೆ ಎದ್ದು ಬಂದ ಹೊಸ ವಿಚಾರಗಳೆಲ್ಲವೂ ಪ್ರೊಟೆಸ್ಟೆಂಟ್; ಇನ್ನು ಕೆಲವರಿಗೆ ಎಲ್ಲವೂ ಕೆಂಪು ಕ್ರಾಂತಿ. ಈ ಎರಡೂ ಕೂಡ ದಾರಿ ತಪ್ಪಿಸುತ್ತವೆ. ನಾವು ಬಿಡಲೇ ಬಾರದ ದಾರಿ ಸಮನ್ವಯ. ಬುದ್ಧ ಮತ್ತು ವಿವೇಕಾನಂದರನ್ನು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಲ್ಲಿಸುವ ಪ್ರಯತ್ನ ವ್ಯವಸ್ಥಿತವಾಗಿ ನಡೆದಿದೆ. ಇಬ್ಬರು ಮಹಾನ್ ವ್ಯಕ್ತಿಗಳನ್ನು ಹೋಲಿಸುವುದಲ್ಲ, ಬದಲಾಗಿ ಅವರಲ್ಲಿಯ ಸಾಮ್ಯವನ್ನು ಎದುರಿಗೆ ಮುಂದಿಡುವ ಪ್ರಯತ್ನ ಈ ಪುಸ್ತಕದಲ್ಲಿದೆ. ವೈಯಕ್ತಿಕ ಬದುಕನ್ನು ಬದಿಗಿಟ್ಟು, ಸಮಾಜ ಉದ್ಧಾರದ ದಾರಿ ಹಿಡಿದ ಈರ್ವರ ಬದುಕು ಮತ್ತು ಅವರು ನೀಡಿದ ಸಂದೇಶಗಳು ಬದುಕಿಗೆ ದಾರಿದೀಪಗಳಾಗಿವೆ. ಜಗತ್ತನ್ನು ವಿಘಟಿಸಬೇಕು ಎಂದು ಸಂಚುರೂಪಿಸುತ್ತಿರುವವರ, ಅದರಲ್ಲೂ ಭಾರತದಲ್ಲಿ ಅಶಾಂತಿಯ ವಾತಾವರಣ ನಿರ್ಮಿಸಬೇಕೆಂದು ಹಲವು ಪ್ರಯತ್ನಗಳನ್ನು ಮಾಡುತ್ತಿರುವವರ ಕುರಿತು ಎಚ್ಚರಿಕೆಯನ್ನು ವಹಿಸಿ, ಸಾಮರಸ್ಯವನ್ನು ಸಾಧಿಸಬೇಕಾದ ಅಗತ್ಯತೆಗಳ ಕುರಿತು ಪುಸ್ತಕ ತಿಳಿಸಿಕೊಡುತ್ತದೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 77958 27307, 63605 81957

## ನಾಗರಿಕ ಶಿಷ್ಟಾಚಾರ

### ವಾಹನ ಚಲಾಯಿಸುವಾಗ ಮೊಬೈಲ್ ಬಳಸಬೇಡಿ

ವಾಹನ ಚಲಾಯಿಸುವಾಗ ಮೊಬೈಲ್ ಬಳಸುವ ಅಭ್ಯಾಸ ಅನೇಕರಿಗಿದೆ. ವಾಹನ ಚಾಲಕರು ಎಷ್ಟೇ ನಿಷ್ಣಾತರಾಗಿದ್ದರೂ, ಮೊಬೈಲ್ ಬಳಸುತ್ತಾ ವಾಹನ ಚಾಲನೆ ಮಾಡುವುದು ಅತ್ಯಂತ ಅಪಾಯಕಾರಿ. ವಾಹನ ಚಾಲಕರು ಪ್ರತಿಯೊಬ್ಬರೂ ವಾಹನ ಚಲಾಯಿಸುವಾಗ ಎರಡು ಸಂಗತಿಗಳನ್ನು ಪ್ರಮುಖವಾಗಿ ಗಮನದಲ್ಲಿರಿಸಿಕೊಳ್ಳಬೇಕು. ವಾಹನ ಚಾಲನೆ ಮಾಡುವುದರಿಂದ ನನಗೇನೂ ತೊಂದರೆ ಆಗಬಾರದು ಮತ್ತು ರಸ್ತೆಯಲ್ಲಿರುವ ಇತರೆ ವಾಹನ ಚಾಲಕರಿಗೆ, ಪಾದಚಾರಿಗಳಿಗೆ ತೊಂದರೆ ಆಗಬಾರದು ಎಂಬ ಎರಡು ಸಂಗತಿಗಳು ವಾಹನ ಚಾಲನೆ ಮಾಡುವವರು ಗಮನಿಸಬೇಕು. ಆದರೆ ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸುವುದು ವಾಹನ ಚಾಲನೆ ಮಾಡುವವರಿಗೂ, ರಸ್ತೆಯಲ್ಲಿನ ಸಹಪಯಣಿಗರಿಗೂ, ಪಾದಚಾರಿಗಳಿಗೂ ಯಾವುದೇ ಸಂದರ್ಭದಲ್ಲಿ ಅಪಘಾತವಾಗಬಹುದು. ಹಾಗಾಗಿ ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸದೆ ನಿಮ್ಮ ಜೀವದ ಜೊತೆಗೆ ಇತರರ ಜೀವವನ್ನೂ ಉಳಿಸುವ ಕರ್ತವ್ಯ ನಮ್ಮ ಮೇಲಿದೆ.



ಒಂದು ವೇಳೆ ಅತ್ಯಂತ ಪ್ರಮುಖವಾದ ಕರೆಯೊಂದನ್ನು ಸ್ವೀಕರಿಸಲೇಬೇಕಾದ ಸ್ಥಿತಿಯಲ್ಲಿದ್ದರೆ, ಒಂದು ನಿಮಿಷ ನಿಮ್ಮ ವಾಹನವನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ, ಮಾತನಾಡಿ, ಮುಂದುವರೆಯಿರಿ. ಅದರಲ್ಲೂ ದ್ವಿಚಕ್ರ ವಾಹನ ಚಾಲಕರು ಇದರಿಂದಾಗಿ ಹೆಚ್ಚು ಅಪಘಾತಕ್ಕೆ ಒಳಗಾಗಿರುವುದು ವರದಿಯಾಗಿದೆ. ಇದರ ಮುಂದುವರೆದ ಭಾಗವಾಗಿ ಬ್ಲೂಟೂತ್, ಏರ್ ಫೋನ್ ಇತ್ಯಾದಿಗಳನ್ನು ಬಳಸಿಕೊಂಡು ವಾಹನ ಚಾಲನೆ ಮಾಡುವುದು ಅತ್ಯಂತ ಅಪಾಯಕಾರಿ. ಇತರೆ ವಾಹನಗಳ ಶಬ್ದದ ಮೂಲಕ ರವಾನಿಸುವ ಸಂದೇಶವೂ ಇದರಿಂದ ತಿಳಿಯುವುದಿಲ್ಲ. ಹಾಗೆಯೇ ಪಾದಚಾರಿಗಳು ಕೂಡ ತಾವು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಮೊಬೈಲ್ ನಲ್ಲಿ ಮಗ್ನರಾಗದೇ ಇರುವುದು ಒಳಿತು. ಅದು ನಿಮ್ಮ ಜೀವವನ್ನು ಉಳಿಸಬಲ್ಲದು.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ ಉದ್ಯಾವರ, ಪಂಚಮಿ ಬಾಕಿಲಪದವು, ಪ್ರಣವ ಭಟ್

## 100GW ಸ್ಥಾಪಿತ ಸೌರಶಕ್ತಿ ಸಾಮರ್ಥ್ಯವನ್ನು ಸಾಧಿಸಿದ ಭಾರತ



ಭಾರತವು 100 ಗಿಗಾವ್ಯಾಟ್‌ಗಳಷ್ಟು (GW) ಸ್ಥಾಪಿತ ಸೌರಶಕ್ತಿ ಸಾಮರ್ಥ್ಯವನ್ನು ದಾಟುವ ಮೂಲಕ ಮಹತ್ವದ ಮೈಲಿಗಲ್ಲು ತಲುಪಿದೆ. ಮಹತ್ವದ ಬೆಳವಣಿಗೆಯಲ್ಲಿ, ಭಾರತವು 100 ಗಿಗಾವ್ಯಾಟ್‌ಗಳಷ್ಟು (GW) ಸ್ಥಾಪಿತ ಸೌರಶಕ್ತಿ ಸಾಮರ್ಥ್ಯವನ್ನು ದಾಟುವ ಮೂಲಕ ಮಹತ್ವದ ಮೈಲಿಗಲ್ಲು ತಲುಪಿದೆ. 2030ರ ವೇಳೆಗೆ 500 GW ಪಳೆಯುಳಿಕೆಯೇತರ ಇಂಧನ ಆಧಾರಿತ ಇಂಧನ ಸಾಮರ್ಥ್ಯದ ಭಾರತದ ಮಹತ್ವಾಕಾಂಕ್ಷೆಯ ಗುರಿಯನ್ನು ಸಾಧಿಸುವತ್ತ ಇದು ಮಹತ್ವದ ಹೆಜ್ಜೆಯಾಗಿದೆ.

## ಭಾರತದ ಮೊದಲ ಸ್ಥಳೀಯ ಸ್ವಯಂಚಾಲಿತ ಬಯೋಮೆಡಿಕಲ್ ತ್ಯಾಜ್ಯ ಸಂಸ್ಕರಣಾ ರಿಗ್ ಅನಾವರಣ



ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ನವದೆಹಲಿಯ ಏಮ್ಸ್‌ನಲ್ಲಿ 'ಸೃಜನಮ್' ಎಂಬ ಹೆಸರಿನ ಭಾರತದ ಮೊದಲ ಸ್ಥಳೀಯ ಸ್ವಯಂಚಾಲಿತ ಬಯೋಮೆಡಿಕಲ್ ತ್ಯಾಜ್ಯ ಸಂಸ್ಕರಣಾ ರಿಗ್ ಅನ್ನು ಬಿಡುಗಡೆ ಮಾಡಿದರು. ತಿರುವನಂತಪುರಂನಲ್ಲಿರುವ ಸಿಎಸ್‌ಐಆರ್ ರಾಷ್ಟ್ರೀಯ ಅಂತರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, NIIST ಅಭಿವೃದ್ಧಿಪಡಿಸಿದ ಈ ರಿಗ್ ದೇಶದಲ್ಲಿ ಈ ರೀತಿಯ ಮೊದಲನೆಯ ರಿಗ್ ಆಗಿದೆ. ದುಬಾರಿ ಮತ್ತು ಶಕ್ತಿ-ತೀವ್ರ ದಹನಕಾರಕಗಳನ್ನು ಅವಲಂಬಿಸದೆ, ರಕ್ತ, ಮೂತ್ರ, ಕಫ ಮತ್ತು ಪ್ರಯೋಗಾಲಯದ ಬಿಸಾಡಬಹುದಾದ ವಸ್ತುಗಳನ್ನು ಒಳಗೊಂಡಂತೆ ರೋಗಕಾರಕ ಬಯೋಮೆಡಿಕಲ್ ತ್ಯಾಜ್ಯವನ್ನು ಸೋಂಕುರಹಿತಗೊಳಿಸಲು ಸೃಜನಮ್ ರಿಗ್ ಅನ್ನು

# ಸಾಲುದ್ದದ ಸುದ್ದಿಗಳು

ವಿನ್ಯಾಸಗೊಳಿಸಲಾಗಿದೆ. ಗಮನಾರ್ಹವಾಗಿ, ರಿಗ್ ದುರ್ವಾಸನೆಗಳನ್ನು ಕೊನೆಗೊಳಿಸುತ್ತದೆ, ವಿಷಕಾರಿ ತ್ಯಾಜ್ಯಕ್ಕೆ ಆಹ್ಲಾದಕರ ಸುಗಂಧವನ್ನು ನೀಡುತ್ತದೆ. ದಿನಕ್ಕೆ 400 ಕೆಜಿ ಸಾಮರ್ಥ್ಯವಿರುವ ಈ ಉಪಕರಣವು ಆರಂಭಿಕ ಹಂತದಲ್ಲಿ ದಿನಕ್ಕೆ 10 ಕೆಜಿ ವೈದ್ಯಕೀಯ ತ್ಯಾಜ್ಯವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.

## ಮಹಾಕುಂಭದಲ್ಲಿ 300 ನೈರ್ಮಲ್ಯ ಕಾರ್ಮಿಕರಿಂದ ನದಿ ಸ್ವಚ್ಛತೆ: ಗಿನ್ನೆಸ್ ದಾಖಲೆ ನಿರ್ಮಾಣ



2025ರ ಮಹಾ ಕುಂಭದಲ್ಲಿ 300 ನೈರ್ಮಲ್ಯ ಕಾರ್ಮಿಕರು ಏಕ ಬಾರಿಗೆ ಸಂಘಟಿತವಾಗಿ ಗಂಗಾ ನದಿ ಶುಚಿಗೊಳಿಸುವ ಕಾಯಕವನ್ನು ಮಾಡಿದ್ದು, ಇದಕ್ಕಾಗಿ ಗಿನ್ನೆಸ್ ವಿಶ್ವ ದಾಖಲೆಯ ಪುಟ ಸೇರಿದ್ದಾರೆ. ಮಹಾ ಕುಂಭಮೇಳದ ಸಿಇಒ ಆಕಾಂಕ್ಷಾ ರಾಣಾ ಅವರ ಪ್ರಕಾರ, 300 ಕಾರ್ಮಿಕರನ್ನು ಒಳಗೊಂಡ ದೊಡ್ಡ ಪ್ರಮಾಣದ ನದಿ ಶುಚಿಗೊಳಿಸುವ ಕಾರ್ಯಕ್ರಮಕ್ಕಾಗಿ ಪಡೆದ ವಿಶ್ವದ ಮೊದಲ ಗಿನ್ನೆಸ್ ದಾಖಲೆ ಇದಾಗಿದೆ. ನಡೆಯುತ್ತಿರುವ ಸ್ವಚ್ಛತಾ ಅಭಿಯಾನದ ಭಾಗವಾಗಿ ಹೆಚ್ಚಿನ ದಾಖಲೆಗಳು ನಿರ್ಮಾಣವಾಗಲಿವೆ. ಮುಂಬರುವ ದಿನಗಳಲ್ಲಿ ಒಟ್ಟು 15,000 ನೈರ್ಮಲ್ಯ ಕಾರ್ಮಿಕರು ಈ ಪ್ರಯತ್ನಕ್ಕೆ ಸೇರುವ ನಿರೀಕ್ಷೆಯಿದೆ.



## ಮುಖ್ಯ ಚುನಾವಣಾ ಆಯುಕ್ತರಾಗಿ ಜ್ಞಾನೇಶ್ ಕುಮಾರ್ ನೇಮಕ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜ್ಞಾನೇಶ್ ಕುಮಾರ್ ಅವರನ್ನು ಮುಂದಿನ ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸಿದ್ದಾರೆ. ಚುನಾವಣಾ ಆಯುಕ್ತರ ನೇಮಕಾತಿಗೆ ಸಂಬಂಧಿಸಿದ ಹೊಸ ಕಾನೂನಿನಡಿಯಲ್ಲಿ ಈ ಹುದ್ದೆಗೆ ನೇಮಕಗೊಂಡ ಮೊದಲ ಸಿಇಸಿ ಎಂಬ ಹೆಗ್ಗಳಿಕೆಗೆ ಜ್ಞಾನೇಶ್ ಪಾತ್ರರಾಗಿದ್ದಾರೆ. ಜ್ಞಾನೇಶ್ ಕುಮಾರ್ 1988ರ ಬ್ಯಾಚ್‌ನ ಕೇರಳ ಕೇಡರ್ ಅಧಿಕಾರಿಯಾಗಿದ್ದು, ಕಳೆದ ವರ್ಷ ಜನವರಿಯಲ್ಲಿ ಸಹಕಾರ ಸಚಿವಾಲಯದ ಕಾರ್ಯದರ್ಶಿಯಾಗಿ ನಿವೃತ್ತರಾದರು. ಜ್ಞಾನೇಶ್ ಕುಮಾರ್ ಐದು ವರ್ಷಗಳ ಕಾಲ ಗೃಹ ಸಚಿವಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಮೊದಲು ಮೇ 2016 ರಿಂದ ಸೆಪ್ಟೆಂಬರ್ 2018 ರವರೆಗೆ ಜಂಟಿ ಕಾರ್ಯದರ್ಶಿಯಾಗಿ ಮತ್ತು ನಂತರ ಸೆಪ್ಟೆಂಬರ್ 2018 ರಿಂದ ಏಪ್ರಿಲ್ 2021 ರವರೆಗೆ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

## ತಾಯಂದಿರ ಮರಣ ಅನುಪಾತ ಶೇ.83 ರಷ್ಟು ಕಡಿಮೆಯಾಗಿದೆ: ಕೇಂದ್ರ

ದೇಶದಲ್ಲಿ ತಾಯಂದಿರ ಮರಣ ಅನುಪಾತವು ಶೇ.83 ರಷ್ಟು ಕಡಿಮೆಯಾಗಿದೆ. ಕಳೆದ 30 ವರ್ಷಗಳಲ್ಲಿ ಜಾಗತಿಕವಾಗಿ ಶೇ.42 ರಷ್ಟು ಇಳಿಕೆಯಾಗಿದ್ದಕ್ಕೆ ಹೋಲಿಸಿದರೆ ಭಾರತದ ಸಾಧನೆ ಗಮನಾರ್ಹವಾಗಿದೆ. ಜಾಗತಿಕವಾಗಿ ಶೇ.55 ರಷ್ಟು ಕುಸಿತ ಕಂಡಿದ್ದ ಶಿಶು ಮರಣ ಪ್ರಮಾಣವು ಶೇ.69ರಷ್ಟು ಕಡಿಮೆಯಾಗಿದೆ. ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಗೆ ಸಂಬಂಧಿಸಿದ ಪ್ರಮುಖ ಫಲಿತಾಂಶಗಳನ್ನು ಸುಧಾರಿಸಲು ದೇಶಾದ್ಯಂತ ಆಸ್ಪತ್ರೆಗಳಲ್ಲಿ 1087 ವಿಶೇಷ ನವಜಾತ ಶಿಶು ಆರೈಕೆ ಘಟಕಗಳು ಮತ್ತು 2868 ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ. ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದ ಬಜೆಟ್‌ನ್ನು 2021-22ರಲ್ಲಿ ರೂ. 935.74 ಲಕ್ಷದಿಂದ 2023-24ರಲ್ಲಿ ರೂ. 8,312.06 ಲಕ್ಷಕ್ಕೆ ಸರ್ಕಾರ ಗಮನಾರ್ಹವಾಗಿ ಹೆಚ್ಚಿಸಿದೆ ಎಂದಿದೆ.

# ಬದುಕನ್ನು ಗೆದ್ದ 'ವಿಜೇತ' ಶಾಲೆಯ ವಿಶೇಷ ಮಕ್ಕಳು

ಪ್ರೇರಣಾ

'ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ, ಮನಸ್ಸೊಂದಿದ್ದರೆ ಮಾರ್ಗವು ಉಂಟು ಕೆಚ್ಚೆದೆ ಇರಬೇಕೆಂದೆಂದು' ಎಂಬ ಹಾಡಿನ ಸಾಲಿಗೆ ಅನ್ವರ್ಥರಾಗಿರುವವರು ಕಾರ್ಕಳದ ವಿಶೇಷ ಚೇತನ ಮಕ್ಕಳು. ಯಾವುದೇ ವ್ಯಕ್ತಿಗೆ ತನ್ನದೇ ಆದ ಶಕ್ತಿ, ಸಾಮರ್ಥ್ಯಗಳಿರುತ್ತವೆ. ಅದನ್ನು ಗುರಿತಿಸಿ ಪ್ರೋತ್ಸಾಹಿಸುವವರು ಸಿಕ್ಕಾಗ ಅಸಾಧ್ಯವಾದುದ್ದನ್ನೂ, ಸಾಧ್ಯವಾಗಿಸುವುದು ಸುಲಭ. ಈ ವಿಶೇಷ ಮಕ್ಕಳ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವವರು ವಿಜೇತ ವಿಶೇಷ ಶಾಲೆ.

ಸುಮಾರು 9 ವರ್ಷಗಳಿಂದ 130 ವಿಶೇಷ ಚೇತನ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದೆ ಕಾರ್ಕಳದ ವಿಜೇತ ವಿಶೇಷ ಶಾಲೆ. ಇಂತಹ ಮಕ್ಕಳನ್ನು ನೋಡಿಕೊಳ್ಳುವುದು ಸುಲಭವಿಲ್ಲ. ಇದರ ಹಿಂದಿನ ರೂವಾರಿಗಳು ಛಲದಿಂದ ಇಂತಹ ಸಂಸ್ಥೆಯನ್ನು ಕಟ್ಟಿದ ಡಾ.ಕಾಂತಿ ಹರೀಶ್ ಹಾಗೂ ಅವರ ಪತಿ ಹರೀಶ್. ಅವರ ಈ ಕಾರ್ಯದ ಜೊತೆಗೆ ಅಲ್ಲಿನ ಶಿಕ್ಷಕರು ಜೊತೆಯಾಗಿದ್ದಾರೆ. ಇವರೆಲ್ಲರ ಪರಿಶ್ರಮದಿಂದ ಈ ವಿಶೇಷ ಮಕ್ಕಳ ಶಾಲೆ ನಡೆಯುತ್ತಿದೆ.

ಕಾರ್ಕಳದ ಕುಕ್ಕುಂದೂರು ಅಯ್ಯಪ್ಪ ನಗರದಲ್ಲಿ ಸಮಾಜದಲ್ಲಿನ ಮಾನಸಿಕವಾಗಿ ಭಿನ್ನ ಸಾಮರ್ಥ್ಯ ಹೊಂದಿರುವ ವಿಶೇಷ ಚೇತನ (ದಿವ್ಯಾಂಗ) ಮಕ್ಕಳು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂಬ ಗುರಿಯೊಂದಿಗೆ ಆರಂಭವಾಗಿದ್ದು ವಿಜೇತ ವಿಶೇಷ ಸಂಸ್ಥೆ. ಮಕ್ಕಳಿಗೆ ವಸತಿನಿಲಯದ ವ್ಯವಸ್ಥೆಯೊಂದಿಗೆ ಉಚಿತ ಶಿಕ್ಷಣ ನೀಡುವ 'ವಿಜೇತ' ವಸತಿಯುತ ವಿಶೇಷ ಶಾಲೆ ಶೈಕ್ಷಣಿಕ ವಿಷಯ ಮಾತ್ರವಲ್ಲದೇ ಬದುಕಿಗೆ ಬೇಕಾಗುವ, ಸ್ವಾವಲಂಬಿಯಾಗಿ ಮುನ್ನಡೆಯುವ ಶಿಕ್ಷಣವನ್ನು ಕಲಿಸುವ ಕಾಯಕವನ್ನು ಮಾಡುತ್ತಿದ್ದಾರೆ.

ಮುಗ್ಧ ಮನಸ್ಸಿನ ಪ್ರತಿಯೊಬ್ಬ ದೇವರ ಮಕ್ಕಳ ಸಮಸ್ಯೆಯೂ ವಿಭಿನ್ನವಾಗಿರುತ್ತದೆ. ಅವರ ಬುದ್ಧಿಶಕ್ತಿಗೆ ಅನುಗುಣವಾಗಿ ಪಾಠವನ್ನು ಕಲಿಸುವ ಜೊತೆಗೆ ವಿಶೇಷವಾಗಿ ಮಕ್ಕಳಿಗೆ ನಿತ್ಯ ಯೋಗ, ಫಿಸಿಯೋಥೆರಫಿ, ಸ್ಪೀಚ್ ಥೆರಫಿ, ಅಕ್ಯುಪೇಶನಲ್ ಥೆರಪಿ, ಕಂಪ್ಯೂಟರ್ ತರಗತಿ, ಕರಕುಶಲ ಕಲೆ, ಚಿತ್ರಕಲೆ, ಯಕ್ಷಗಾನ ಸ್ಮರಣಿಕೆ



ತಯಾರಿ, ದೀಪಾವಳಿ ಸಂದರ್ಭ ಹಣತೆ ತಯಾರಿ, ಪೇಪರ್ ಕ್ರಾಫ್ಟ್, ವಿವಿಧ ರೀತಿಯ ಹೂಗುಚ್ಛ ಹೀಗೆ ನಾನಾ ಬಗೆಯ ವಸ್ತುಗಳನ್ನು ತಯಾರಿಸುವಲ್ಲಿ ಇಲ್ಲಿನ ವಿಶೇಷ ವಿದ್ಯಾರ್ಥಿಗಳು ನಿಪುಣರಾಗಿದ್ದು, ವೃತ್ತಿ ತರಬೇತಿ, ದೈಹಿಕ ಶಿಕ್ಷಣ ತರಬೇತಿ ಹಾಗೂ ಸಾಂಸ್ಕೃತಿಕ ತರಬೇತಿ ನೀಡಲಾಗುತ್ತಿದೆ. ಹೀಗೆ ಬಹುಮುಖವಾಗಿ ದೇವರ ಮಕ್ಕಳನ್ನು ಬೆಳೆಸುವ ವಿಶಿಷ್ಟವಾದ ಕಾರ್ಯವನ್ನು ಡಾ.ಕಾಂತಿ ಹರೀಶ್ ಹಾಗೂ ಅಲ್ಲಿನ 32 ಶಿಕ್ಷಕರು ಮಾಡುತ್ತಿದ್ದಾರೆ.

ಸರ್ಕಾರದಿಂದ 50% ಅನುದಾನ ಬರುತ್ತಿದ್ದು, ಉಳಿದ ಮೊತ್ತವನ್ನು ಕ್ರೋಡಿಕರಿಸುವುದೇ ದೊಡ್ಡ ಸವಾಲಾಗಿದೆ. ಸಹೃದಯಿ ದಾನಿಗಳ ನೆರವಿನಿಂದ ಇಲ್ಲಿವರೆಗೂ ಬರಲು ಸಾಧ್ಯವಾಗಿದೆ. ಹೀಗಾಗಿ ಹಲವು ಸವಾಲುಗಳ ಮಧ್ಯೆ ದೇವರ ಮಕ್ಕಳನ್ನು ಸಮಾಜದ ಭಾಗವಾಗಿಸಲು ಶ್ರಮಿಸುತ್ತಿರುವ, ದೇವರ ಮಕ್ಕಳ ಸೇವೆಯನ್ನು ಮಾಡುತ್ತಿರುವ ಡಾ.ಕಾಂತಿ ಹರೀಶ್ ಹಾಗೂ ಅಲ್ಲಿನ ಶಿಕ್ಷಕರ ಪ್ರಯತ್ನ ಶ್ಲಾಘನೀಯ.

ರಾಷ್ಟ್ರಸಂತ ಸ್ವಾಮಿ ವಿವೇಕಾನಂದರು ಹೇಳಿದಂತೆ 'ಅದಾದಲೇ ಪ್ರತಿಯೊಬ್ಬನಲ್ಲೂ ಸೂಪ್ತವಾಗಿ ಅಡಗಿರುವ ಪರಪೂರ್ಣತೆಯನ್ನು ಗುರುತಿಸುವುದೇ ನಿಜವಾದ ಶಿಕ್ಷಣ'. ಈ ಮಾತಿಗೆ ಪೂರಕವಾಗಿ ವಿಜೇತ ವಿಶೇಷ ಶಾಲೆ ಕಾರ್ಯಪ್ರವೃತ್ತವಾಗಿದೆ. ಪ್ರತಿ ಮಗುವಿನ ಸಾಮರ್ಥ್ಯವನ್ನು ಗುರುತಿಸಿ, ಪ್ರೋತ್ಸಾಹಿಸುವವರ ಸಂಖ್ಯೆ ಹೆಚ್ಚಾಗಲಿ.

## ಇಸ್ರೋ ಮೈಲಿಗಲ್ಲು: 10-ಟನ್ ಪ್ರೊಪೆಲ್ಲಂಟ್ ಮಿಕ್ಸರ್ ಅಭಿವೃದ್ಧಿ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಘನ ಮೋಟಾರ್‌ಗಳಿಗಾಗಿ ಅತ್ಯಾಧುನಿಕ 10-ಟನ್ ಪ್ರೊಪೆಲ್ಲಂಟ್ ಮಿಕ್ಸರ್ ಅನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದೆ. ಇದು ಭಾರತದ ಬಾಹ್ಯಾಕಾಶ ತಂತ್ರಜ್ಞಾನದ ಸಾಮರ್ಥ್ಯಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸೂಚಿಸುತ್ತದೆ.

ಅಧಿಕೃತ ಹೇಳಿಕೆಯಲ್ಲಿ, ISRO ಬಾಹ್ಯಾಕಾಶ ಯಾನದಲ್ಲಿ ಘನ ಪ್ರೊಪಲ್ಷನ್‌ನ ಮಹತ್ವವನ್ನು ತಿಳಿಸಿತು. ರಾಕೆಟ್ ಮೋಟಾರ್‌ಗಳ ಅಡಿಪಾಯವನ್ನು ರೂಪಿಸುವ ಘನ ಪ್ರೊಪೆಲ್ಲಂಟ್‌ಗಳನ್ನು ಉತ್ಪಾದಿಸುವ ಸಂಕೀರ್ಣತೆಯನ್ನು ಸಂಸ್ಥೆಯು ಒತ್ತಿಹೇಳಿತು. ಇದಕ್ಕೆ ಹೆಚ್ಚು ಸೂಕ್ಷ್ಮ ಮತ್ತು ಅಪಾಯಕಾರಿ ಪದಾರ್ಥಗಳ ಎಚ್ಚರಿಕೆಯಿಂದ ಮತ್ತು ನಿಖರವಾದ ಮಿಶ್ರಣದ ಅಗತ್ಯವಿರುತ್ತದೆ.

ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ (SDSC) ಬೆಂಗಳೂರಿನಲ್ಲಿರುವ ಕೇಂದ್ರ ಉತ್ಪಾದನಾ ತಂತ್ರಜ್ಞಾನ ಸಂಸ್ಥೆ (CMTI) ಯೊಂದಿಗೆ ವಿಶ್ವದ ಅತಿದೊಡ್ಡ ಘನ ಪ್ರೊಪೆಲ್ಲಂಟ್ ಮಿಕ್ಸಿಂಗ್ ಉಪಕರಣವನ್ನು ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು ಸಹಕರಿಸಿದೆ. ಈ ಅತ್ಯಾಧುನಿಕ ತಂತ್ರಜ್ಞಾನವು ಘನ ಮೋಟಾರ್ ವಿಭಾಗಗಳಿಗೆ ಉತ್ಪಾದನಾ ದಕ್ಷತೆಯನ್ನು ಹೆಚ್ಚಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಶೈಕ್ಷಣಿಕ ಮತ್ತು ಉದ್ಯಮದ ಸಹಯೋಗದೊಂದಿಗೆ ಕಾರ್ಯಗತಗೊಳಿಸಲಾದ ಈ ಯೋಜನೆಯು ಬಾಹ್ಯಾಕಾಶ ಇಲಾಖೆಯ ಭಾಗವಾಗಿದೆ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th FEBRUARY 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-03-2025



## ಶಿವಾಜಿಯ 12 ಕೋಟೆ ಯುನೆಸ್ಕೋ ಪಟ್ಟಿಗೆ ಸೇರಿಸಲು ಕೇಂದ್ರದಿಂದ ನಾಮನಿರ್ದೇಶನ

ಹಿಂದವಿ ಸಾಮ್ರಾಜ್ಯ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಜೀವನ ಮತ್ತು ಕಾಲಕ್ಕೆ ಸಂಬಂಧಿಸಿದ ಹನ್ನೆರಡು ಕೋಟೆಗಳು ಶೀಘ್ರದಲ್ಲೇ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲಿವೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ಮಹಾರಾಷ್ಟ್ರ ಸರ್ಕಾರವು ಸಂಘಟಿತ ಪ್ರಯತ್ನಗಳನ್ನು ಮಾಡುತ್ತಿವೆ. 2024–25ನೇ ಸಾಲಿನ ಯುನೆಸ್ಕೋ ವಿಶ್ವ ಪರಂಪರೆಯ ಪಟ್ಟಿಗೆ “ಭಾರತದ ಮರಾಠಾ ಮಿಲಿಟರಿ ಭೂದೃಶ್ಯಗಳು” ಎಂದು ಭಾರತ ನಾಮನಿರ್ದೇಶನ ಮಾಡಿದೆ. “ಛತ್ರಪತಿ ಶಿವಾಜಿ ಮಹಾರಾಜರಿಗೆ ಸಂಬಂಧಿಸಿದ ಹನ್ನೆರಡು ಕೋಟೆಗಳು ಶೀಘ್ರದಲ್ಲೇ ವಿಶ್ವ ಪರಂಪರೆಯ ತಾಣಗಳಾಗಲಿವೆ” ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.



## “ವಾಕ್ ಸ್ವಾತಂತ್ರ್ಯದ ಹೆಸರಲ್ಲಿ ಸಮಾಜ ವಿರೋಧಿ ಹೇಳಿಕೆ ಸಲ್ಲ”: ಸುಪ್ರೀಂಕೋರ್ಟ್

‘ಇಂಡಿಯಾಸ್ ಗಾಟ್ ಲ್ಯಾಟೆಂಟ್’ ಹಾಸ್ಯ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗಿಯಾದ ವೇಳೆ ಯೂಟ್ಯೂಬರ್ ರಣವೀರ್ ಅಲಹಾಬಾದ್ ಅವರು ನೀಡಿದ ಹೇಳಿಕೆಗಳು ಇಡೀ ದೇಶವನ್ನೇ ಆಕ್ರೋಶಕ್ಕೆ ಈಡಾಗುವಂತೆ ಮಾಡಿತ್ತು. ಸುಪ್ರೀಂಕೋರ್ಟ್ ಕೂಡ ಅವರ ಹೇಳಿಕೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. ಅಶ್ಲೀಲತೆ ಮತ್ತು ಅಶ್ಲೀಲತೆಯ ನಿಯತಾಂಕಗಳು ಯಾವುವು ಎಂದು ರಣವೀರ್ ಅವರನ್ನು ಪ್ರತಿನಿಧಿಸಿದ ವಕೀಲರನ್ನು ಸುಪ್ರೀಂಕೋರ್ಟ್ ಕೇಳಿದೆ. ನ್ಯಾಯಾಧೀಶ ಸೂರ್ಯಕಾಂತ್ ನೇತೃತ್ವದ ಪೀಠ ರಣವೀರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು “ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಸಮಾಜದ ನಿಯಮಗಳ ವಿರುದ್ಧ ಯಾರಿಗೂ ಏನು ಬೇಕಾದರೂ ಮಾತನಾಡಲು ಪರವಾನಗಿ ಇಲ್ಲ. ನಿಮ್ಮ ಕೊಳಕು ಮನಸ್ಸನ್ನು ಹೊರಹಾಕಿ ಏನು ಬೇಕಾದರೂ ಹೇಳಲು ಆಗುವುದಿಲ್ಲ. ನೀವು ಆಡಿದ ಮಾತುಗಳಿಂದ ಪೋಷಕರು ನಾಚಿಕೆಪಡುತ್ತಾರೆ, ಸಹೋದರಿಯರು ನಾಚಿಕೆಪಡುತ್ತಾರೆ. ಇಡೀ ಸಮಾಜವು ನಾಚಿಕೆಪಡುತ್ತದೆ. ನಮ್ಮಲ್ಲಿ ಕಾನೂನಿನ ನಿಯಮಕ್ಕೆ ಬದ್ಧವಾಗಿರುವ ನ್ಯಾಯಾಂಗ ವ್ಯವಸ್ಥೆ ಇದೆ. ಬೆದರಿಕೆಗಳಿದ್ದರೆ, ಕಾನೂನು ಕ್ರಮ ಕೈಗೊಳ್ಳುತ್ತದೆ. ಯಾರಾದರೂ ತಾನು ತುಂಬಾ ಜನಪ್ರಿಯನಾಗಿದ್ದೇನೆ ಮತ್ತು ಯಾವುದೇ ರೀತಿಯ ಪದಗಳನ್ನು ಬೇಕಾದರೂ ಮಾತನಾಡಬಲ್ಲೆ ಎಂದು ಭಾವಿಸಿದರೆ ಅದು ತಪ್ಪು. ಇಡೀ ಸಮಾಜವನ್ನು ಹಗುರವಾಗಿ ಪರಿಗಣಿಸಲಾಗುವುದಿಲ್ಲ ಎಂದಿದೆ.

## “56 ಕೋಟಿ ಜನರ ನಂಬಿಕೆಯೊಂದಿಗೆ ಆಟವಾಡಬೇಡಿ”: ಯೋಗಿ ಆದಿತ್ಯನಾಥ್

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭದ ಕುರಿತು ವಿವಾದಾತ್ಮಕ ಹೇಳಿಕೆ ನೀಡುತ್ತಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಆರ್‌ಜೆಡಿ ಮುಖ್ಯಸ್ಥ ಲಾಲು ಯಾದವ್, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಇತರರು ಸೇರಿದಂತೆ ವಿರೋಧ ಪಕ್ಷದ ನಾಯಕರನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ



ಯೋಗಿ ಆದಿತ್ಯನಾಥ್ ತರಾಟೆಗೆ ತೆಗೆದುಕೊಂಡಿದ್ದಾರೆ. ಉತ್ತರ ಪ್ರದೇಶದ ವಿಧಾನಸಭೆಯಲ್ಲಿ, ಸಿಎಂ ಯೋಗಿ ಆದಿತ್ಯನಾಥ್ ಮಹಾಕುಂಭದ ಶ್ರೇಷ್ಠತೆಯನ್ನು ಒತ್ತಿ ಹೇಳಿದರು ಮತ್ತು ಸನಾತನ ಧರ್ಮ, ಗಂಗಾ ಮಾತೆ ಮತ್ತು ಭಾರತದ ವಿರುದ್ಧ ತಪ್ಪು ಮಾಹಿತಿ ಹರಡುವುದನ್ನು ಖಂಡಿಸಿದರು. ನಾವು ಇಲ್ಲಿ ಚರ್ಚೆಯಲ್ಲಿ ಭಾಗವಹಿಸುತ್ತಿರುವ ಈ ಸಮಯದಲ್ಲಿ 56.25 ಕೋಟಿಗೂ ಹೆಚ್ಚು ಭಕ್ತರು ಈಗಾಗಲೇ ಪ್ರಯಾಗ್‌ರಾಜ್‌ನಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ನಾವು ಸನಾತನ ಧರ್ಮ, ಗಂಗಾ ಮಾತೆ, ಭಾರತ ಅಥವಾ ಮಹಾಕುಂಭದ ವಿರುದ್ಧ ಯಾವುದೇ ಆಧಾರರಹಿತ ಆರೋಪಗಳನ್ನು ಮಾಡಿದಾಗ ಅಥವಾ ನಕಲಿ ವೀಡಿಯೊಗಳನ್ನು ಮಾಡಿದಾಗ, ಅದು ಈ 56 ಕೋಟಿ ಜನರ ನಂಬಿಕೆಯೊಂದಿಗೆ ಆಟವಾಡಿದಂತಾಗುತ್ತದೆ. ಮಹಾ ಕುಂಭವು ಯಾವುದೇ ರಾಜಕೀಯ ಘಟಕವಲ್ಲ, ಸಮಾಜಕ್ಕೆ ಸೇರಿದ್ದು. ಸರ್ಕಾರವು ತನ್ನ ಜವಾಬ್ದಾರಿಗಳನ್ನು ಪೂರ್ಣಗೊಳಿಸಲು ಸೇವಕನಾಗಿ ಇದೆ” ಎಂದರು.

## ಕಾನೂನು ಅಧ್ಯಯನಕ್ಕೂ ಆನ್‌ಲೈನ್ ಕ್ಲಾಸ್: ದೆಹಲಿ ಹೈಕೋರ್ಟ್ ನಿರ್ದೇಶನ

ಕಾನೂನು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಆನ್‌ಲೈನ್ ತರಗತಿಗಳನ್ನು ನಡೆಸುವ ವ್ಯವಸ್ಥೆಯನ್ನು ಪರಿಶೀಲಿಸುವಂತೆ ದೆಹಲಿ ಯೂನಿವರ್ಸಿಟಿ ಹಾಗೂ ಬಾರ್ ಕೌನ್ಸಿಲ್ ಆಫ್ ಇಂಡಿಯಾಗೆ ದೆಹಲಿ ಹೈಕೋರ್ಟ್ ನಿರ್ದೇಶನ ನೀಡಿದೆ.

ವೃತ್ತಿಪರ ಕೋರ್ಸ್‌ಗಳಲ್ಲಿ ಭೌತಿಕ ತರಗತಿಗಳು ಅತ್ಯಂತ ಮೌಲಿಕವಾಗಿವೆ ಎಂಬುದನ್ನು ಅನುಮೋದಿಸಿದ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರಿದ್ದ ಪೀಠವು, ನಿರಂತರವಾಗಿ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯಂಥ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳ ಮೂಲಕ ಅತ್ಯಂತ ಪರಿಣಾಮಕಾರಿಯಾದ ದೂರಶಿಕ್ಷಣ ವ್ಯವಸ್ಥೆ ರೂಪಿಸಬಹುದು ಎಂದಿದೆ.

ಅರ್ಜಿ ವಜಾ: ಇದೇ ವೇಳೆ ಹಾಜರಾತಿ ಕೊರತೆಯಿಂದ ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶ ನೀಡದಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳನ್ನು ವಜಾಗೊಳಿಸಿತು. ಕನಿಷ್ಠ ಹಾಜರಾತಿ ಮಾನದಂಡಗಳ ವಿಚಾರದಲ್ಲಿ ಹಸ್ತಕ್ಷೇಪಕ್ಕೆ ಕೋರ್ಟ್ ನಿರಾಕರಿಸಿತು. ಬದಲಾಗಿ ತಂತ್ರಜ್ಞಾನಾಧಾರಿತ, ಅತ್ಯಾಧುನಿಕ ವರ್ಚುವಲ್ ತರಗತಿಗಳಂಥ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಬಾರ್ ಕೌನ್ಸಿಲ್ ಆಫ್ ಇಂಡಿಯಾಗೆ ಸಲಹೆ ನೀಡಿತು. ಸೂಕ್ತ ಭದ್ರತಾ ಕ್ರಮಗಳು ಹಾಗೂ ಅರ್ಹತಾ ಷರತ್ತುಗಳನ್ನು ಆಧರಿಸಿ ಆನ್‌ಲೈನ್ ತರಗತಿ ವ್ಯವಸ್ಥೆಯನ್ನು ರೂಪಿಸಬೇಕೆಂದು ಸೂಚಿಸಿತು.

ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಗಳ ಅನುಸಾರ ಕಾನೂನು ಪದವಿಯನ್ನು ದೂರಶಿಕ್ಷಣ, ಆನ್‌ಲೈನ್ ಇತರ ಮೂಲಗಳ ಮೂಲಕ ಪಡೆಯಲು ಅವಕಾಶವಿಲ್ಲ. ಜತೆಗೆ, ವಿದ್ಯಾರ್ಥಿಗಳು ಇದೇ ಅವಧಿಯಲ್ಲಿ ಬೇರೆ ಕೋರ್ಸ್‌ಗಳಿಗೆ ಸೇರಿಕೊಳ್ಳುವಂತಿಲ್ಲ. ಇತರ ಉದ್ಯೋಗವನ್ನು ಮಾಡುವಂತಿಲ್ಲ ಎಂದು ಷರತ್ತುಗಳನ್ನು ವಿಧಿಸಿದೆ. ಹೊಂದಿರುವುದು ಕಡ್ಡಾಯವಾಗಿದೆ. ಶೇ.75 ಹಾಜರಾತಿ ಹೊಂದಿರುವುದು ಕಡ್ಡಾಯವಾಗಿದೆ.

## ವಿದೇಶದಲ್ಲಿ ವೈದ್ಯಕೀಯ ಕೋರ್ಸ್: ನಿಯಮ ಎತ್ತಿಹಿಡಿದ ಸುಪ್ರೀಂ ಕೋರ್ಟ್

ವಿದೇಶದ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಪಡೆಯಬೇಕು ಎಂದಾದರೆ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಉತ್ತೀರ್ಣ ಆಗಬೇಕು ಎಂದು ಭಾರತೀಯ ವೈದ್ಯಕೀಯ ಪರಿಷತ್ತು ರೂಪಿಸಿರುವ ನಿಯಮವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ನಿಯಮಗಳು ಸಂವಿಧಾನದ ವ್ಯಾಪ್ತಿಯನ್ನು ಮೀರಿಲ್ಲ, ಭಾರತೀಯ ವೈದ್ಯಕೀಯ ಪರಿಷತ್ತು ಕಾಯ್ದೆ – 1956ರ ಯಾವುದೇ ಅಂಶಗಳಿಗೆ ವಿರುದ್ಧವಾಗಿಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ. ವಿದೇಶಗಳಲ್ಲಿ ಎಂಬಿಬಿಎಸ್ ಓದಿದ ವಿದ್ಯಾರ್ಥಿಗಳು ಭಾರತದಲ್ಲಿ ವೈದ್ಯ ವೃತ್ತಿಯಲ್ಲಿ ತೊಡಗಲು ಬಯಸುವುದಾದರೆ ಅವರು ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯ ಎಂಬ ನಿಯಮವು 2018ರಿಂದ ಜಾರಿಯಲ್ಲಿದೆ. ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣ ಆಗುವುದು ಕಡ್ಡಾಯ ಎಂಬ ನಿಯಮವನ್ನು 2018ರಲ್ಲಿ ಶಾಸನಕ್ಕೆ ತಿದ್ದುಪಡಿ ತರದೆಯೇ ಜಾರಿಗೊಳಿಸಲಾಯಿತು ಎಂದು ಅರ್ಜಿದಾರರಾದ ಅರುಣಾದಿತ್ಯ ದುಬೆ ಅವರು ದೂರಿದ್ದರು. ಹೀಗಾಗಿ, ನೀಟ್ ಉತ್ತೀರ್ಣ ಕಡ್ಡಾಯ ಎಂಬ ನಿಯಮನ್ನು ಬಲವಂತದಿಂದ ಜಾರಿಗೊಳಿಸಬಾರದು ಎಂದು ಅವರು ಕೋರಿದ್ದರು.

## ಮಕ್ಕಳಿಗೆ ನೀತಿಪಾಠ ಅಗತ್ಯ: ಸುಧಾಮೂರ್ತಿ



ಮಕ್ಕಳು ಶಾಲೆಗೆ ಹೋಗಿ ಶಿಕ್ಷಣ ಪಡೆಯಬಹುದು. ಆದರೆ, ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡದೇ ಹೋದರೆ ಅವರು ದೇಶಕ್ಕೆ ಉತ್ತಮ ನಾಗರಿಕರಾಗು ವುದಿಲ್ಲ, ಉತ್ತಮ ಸಮಾಜ ನಿರ್ಮಾಣ ವಾಗುವುದಿಲ್ಲ ಎಂದು ಸಂಸದೆ ಸುಧಾಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ನೈತಿಕ ಮೌಲ್ಯ ಇಲ್ಲದ ಮಗು ಉತ್ತಮ ನಾಗರಿಕನಾಗಲು ಅಸಾಧ್ಯ. ಪ್ರಸ್ತುತ ನಾವು ಕೃತಕ ಬುದ್ಧಿಮತ್ತೆ(ಎಐ), ತಂತ್ರಜ್ಞಾನ, ತಾಂತ್ರಿಕ ನೈಪುಣ್ಯ, ವಿಜ್ಞಾನ, ಗಣಿತ ಮೊದಲಾದ ವಿಷಯಗಳಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದ್ದೇವೆ. ಆದರೆ ಮಕ್ಕಳಿಗೆ ಶೈಕ್ಷಣಿಕ ಬದುಕಿನ ಆರಂಭದಲ್ಲಿ ಮೌಲ್ಯಯುತ, ನೀತಿಯುತ ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.

‘ಮಕ್ಕಳು ಹೇಳಿದ ಮಾತು ಕೇಳುತ್ತಿಲ್ಲ’ ಎಂದು ಅನೇಕ ಪೋಷಕರು ದೂರುತ್ತಾರೆ. ಆದರೆ ಆ ಸಮಸ್ಯೆಗೆ ತಕ್ಷಣದ ಪರಿಹಾರ ಎಂಬುದಿಲ್ಲ. ಪರಿಹಾರ ಖಂಡಿತಾ ಇದೆ. ಅದುವೇ ಆರಂಭಿಕ ದಿಸೆಯಲ್ಲೇ ನೀಡಬೇಕಾದ ನೈತಿಕ ಶಿಕ್ಷಣ. ಮಕ್ಕಳಿಗೆ ಅವರ ದಾರಿಯಲ್ಲೇ ಹೋಗಿ ಮೌಲ್ಯಯುತ ಶಿಕ್ಷಣ ನೀಡಬೇಕು. ನೀತಿ ಕಥೆಗಳನ್ನು ಹೇಳುವ ಮೂಲಕ ಬದುಕಿನ ಏಳು–ಬೀಳು, ಪ್ರಾಮಾಣಿಕತೆ, ಉತ್ತಮ ನಡೆ, ಸತ್ಯಸಂದತೆ ಮೊದಲಾದ ಮೌಲ್ಯಗಳನ್ನು ಅವರ ಮನಸ್ಸಿಗೆ ನಾಟಿಸಬೇಕು. ಕರ್ನಾಟಕದ ಒಂದು ಶಾಲೆಯಲ್ಲಿ ನಾವು ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿ ಯಶಸ್ವಿ ಯಾಗಿದ್ದೇವೆ ಎಂದು ವಿವರಿಸಿದರು.

ಪ್ರಾಥಮಿಕ – ಪ್ರೌಢ ಶಾಲೆಗಳಲ್ಲಿ ನೀತಿ ಕಥೆ ತರಗತಿ ಕಡ್ಡಾಯ ಮಾಡಬೇಕಿದೆ. ಶಿಕ್ಷಕರ ತರಬೇತಿ ಶಿಕ್ಷಣದ ಅವಧಿಯಲ್ಲೇ ಇದನ್ನು ಅಳವಡಿಸಬೇಕು. ಸಾವಿರಾರು ನೀತಿ ಕಥೆಗಳನ್ನು ಹೇಳುವ ‘ಕಥಾಸರಿತ್ ಸಾಗರ’ದಂತಹ ಶ್ರೇಷ್ಠ ಪರಂಪರೆ ಭಾರತದಲ್ಲಿದೆ. ಆದರೆ ನಾವೀಗ ಅದರ ಮೌಲ್ಯವನ್ನೇ ಮರೆತುಬಿಟ್ಟಿದ್ದೇವೆ. ಸದಾ ಪಾಶ್ಚಿಮಾತ್ಯ ರಾಷ್ಟ್ರಗಳತ್ತ ನೋಡುತ್ತೇವೆ. ಅತ್ಯದ್ಭುತ ಕಥೆಗಳನ್ನು ಮುಂದಿನ ಪೀಳಿಗೆಗೆ ರವಾನಿಸುವ ಪರಂಪರೆಯನ್ನು ಭಾರತ ಹೊಂದಿದೆ. ಹೀಗಾಗಿ ಕಥೆ ಹೇಳುವ ಪರಂಪರೆಯನ್ನು ನಾವು ಎಂದಿಗೂ ನಿರ್ಲಕ್ಷ್ಯ ಮಾಡಬಾರದು. ಎಲ್ಲಾ ಶಾಲೆಗಳಲ್ಲಿ ಕಥೆ ಹೇಳುವುದನ್ನು ಪಠ್ಯೇತರ ಚಟುವಟಿಕೆಯಾಗಿ ಅಳವಡಿಸಬೇಕು ಕಥೆಗಳಿಂದ ಮಾತ್ರವೇ ಮಕ್ಕಳಲ್ಲಿ ಕಲ್ಪನಾಶಕ್ತಿ, ವಿಶೇಷ ಕೌಶಲ ವೃದ್ಧಿಯಾಗುವಂತೆ ಮಾಡಲು ಸಾಧ್ಯ ಎಂದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.